ರಾಜ್ಯದಲ್ಲಿ ಪಡಿತರ ಚೀಟಿಯ ವಿತರಣೆ

41 (22)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1997-98ನೇ ಸಾಲಿನಲ್ಲಿ ಎಷ್ಟು ನಕಲಿ ಪಡಿತರ ಚೀಟಿಯನ್ನು ಮುಟ್ಟುಗೋಲು ಹಾಕಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಹೊಸ ಪಡಿತರ ಚೀಟಿ ಪಡೆಯಲು ಸರ್ಕಾರದವರು ನಿರೂಪಿಸಿರುವ ನೀತಿ ನಿಯಮಗಳೇನು?

ಇ) ಬಡಜನತೆಗೆ ಕೊಡುವ ಹಸಿರು ಪಡಿತರ ಚೀಟಿಗಳ ವಿತರಣೆಯನ್ನು ನಿಲ್ಲಿಸಲಾಗಿದೆಯೇ? ನಿಲ್ಲಿಸಲಾಗಿದ್ದಲ್ಲಿ ಯಾವಾಗ ವಿತರಣೆ ಮಾಡಲಾಗುವುದು?

ಶ್ರೀ ಜಿ.ಬಸವಣ್ಣಪ್ಪ (ಆಸಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ರಾಜ್ಯದಲ್ಲಿ ದಿನಾಂಕ 31-12-97ರ ತರಕ ಒಟ್ಟು 11,25,678 ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿದೆ. ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ.

ಸರ್ಕಾರದ ಸುತ್ತೋಲೆ ಸಂ.ಎಫ್‌ಸಿಎಸ್ 20 ಡಿಆರ್‌ಎ 97 ದಿನಾಂಕ 5-2-97 ರನ್ವಯ ಹೊಸ ಪಡಿತರ ಚೀಟಿ ವಿತರಿಸಲು ಅರ್ಜಿಯ ಜೊತೆಯಲ್ಲಿ

1. ಅರ್ಜಿದಾರರ ಎರಡು ಭಾವ ಚಿತ್ರಗಳು.

2. ಸ್ವಂತ ಮನೆ ಹೊಂದಿದ್ದಲ್ಲಿ ಮನೆ ಕಂದಾಯ ಪಾವತಿಸಿದ ರಶೀದಿಯ ನಕಲು ಅಥವಾ ಬಾಡಿಗೆದಾರರಾಗಿದ್ದಲ್ಲಿ ಬಾಡಿಗೆ ಪಾವತಿಸಿದ ರಶೀದಿ.

3. ಮತದಾರರ ಪಟ್ಟಿಯ ಪ್ರತಿ.

4. ಅಧ್ಯರ್ಪಣಾ ಪತ್ರ ಅಥವಾ ಹೆಸರು ತೆಗೆದ ಬಗ್ಗೆ

ದೃಡೀಕರಣ ಪತ್ರ ಅಥವಾ ವಲಸೆ ಪ್ರಮಾಣ ಪತ್ರ. ಅರ್ಜಿಗಳನ್ನು ಸಂಬಂಧಿಸಿದ ಆಹಾರ ನಿರೀಕ್ಷಕರು ಪ್ರತ್ಯೇಕ ವಿವರ ಪರಿಶೀಲನೆಗೆ ಒಳಪಡಿಸಿದ ನಂತರ 30 ದಿನಗಳ ಒಳಗಾಗಿ ಪಡಿತರ ಚೀಟಿಯನ್ನು ವಿತರಿಸಲಾಗುವುದು.

ಇ) ಸದ್ಯಕ್ಕೆ ಬಡಜನತೆಗೆ ಹಸಿರು ಕಾರ್ಡುಗಳ ವಿತರಣೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಸರ್ಕಾರವು ಪ್ರಸ್ತುತ ಮನೆ ಮನೆಗೆ ಹೋಗಿ ಪಡಿತರ ಚೀಟಿ

ಸಮೀಕ್ಷೆ ಕಾರ್ಯವನ್ನು ಹಮ್ಮಿಕೊಂಡಿದ್ದು ಈ ಕಾರ್ಯ ಕ್ರಮವು ಅಂತಿಮಗೊಂಡ ಕೂಡಲೇ ಅರ್ಹ ಬಡಜನತೆಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ದಿನಾಂಕ 31.12.97ರ ತನಕ ಪತ್ತೆಹಚ್ಚಿ ರದ್ದುಪಡಿಸಿದ ನಕಲಿ ಪಡಿತರ ಚೀಟಿಗಳ ಜಿಲ್ಲಾವಾರು ಮಾಹಿತಿಗಯ ಪಟ್ಟಿ.

ಕ್ರ. ಸಂ.	ಜಿಲ್ಲೆಯ ಹೆಸರು	ಒಟ್ಟು
1.	ಬೆಂಗಳೂರು (ಅಪ)	1,08,716
2.	ಬೆಂಗಳೂರು (ನಗರ)	43,242
3.	ಬೆಂಗಳೂರು (ಗ್ರಾ)	54,200
4.	ಬಾಗಲಕೋಟೆ	
5.	ಬಿಜಾಪುರ	44,323
6.	ಬೆಳಗಾಂ	18,119
7.	ಬಳ್ಳಾರಿ	59,877
8.	ಬೀದರ್	47,004
9.	ಚಾಮರಾಜನಗರ	
10.	ಮೈಸೂರು	1,04,468
11.	ಚಿಕ್ಕಮಗಳೂರು	28,758
12.	ಚಿತ್ರದುರ್ಗ	
13.	ದಾವಣಗೆರೆ	60,925
14.	ದಕ್ಷಿಣ ಕನ್ನಡ	19,548
15.	ಉಡುಪಿ	

16.	ಧಾರವಾಡ	
17.	ಗದಗ್	64,603
18.	ಹಾವೇರಿ	
19.	ಗುಲ್ಬರ್ಗ	60,779
20.	ಹಾಸನ	81,003
21.	ಕೊಡಗು	41,901
22.	ಕೋಲಾರ	24,451
23.	ಕೊಪ್ಪಳ	
24.	ರಾಯಚೂರು	30,288
25.	ಮಂಡ್ಯ	77,616
26.	ಶಿವಮೊಗ್ಗ	42,980
27.	ತುಮಕೂರು	64,367
28.	ಉತ್ತರ ಕನ್ನಡ	18,510
	ಒಟ್ಟು	11,25,678

ಭೂ ನ್ಯಾಯಮಂಡಳಿಯಲ್ಲಿ ಬಾಕಿ ಇರುವ ಪ್ರಕರಣಗಳು

42 (25)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಲೇವಾರಿಗಾಗಿ ಎಷ್ಟು ಕೇಸುಗಳು ಭೂ ನ್ಯಾಯ ಮಂಡಳಿಯಲ್ಲಿ ಬಾಕಿ ಇದೆ; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) 1997-98ನೇ ಸಾಲಿನ ಜನವರಿ 31ರವರೆಗೆ ಎಷ್ಟು ಕೇಸುಗಳನ್ನು ಇತ್ಯರ್ಥ